KACB200009712023

# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬಾಗೇಪಲ್ಲಿ.

ದಿನಾಂಕ 07 ನೇ ಮಾಹೆ ಜುಲೈ 2026

ಉಪಸ್ಥಿತರು

**ಶ್ರೀಮತಿ. ರಂಜೀತಾ ಎಸ್.,** ಎಂ.ಎಸ್.ಡಬ್ಲ್ಯೂ. ಎಲ್.ಎಲ್.ಬಿ.
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

**ಸಿ.ಸಿ ಸಂಖ್ಯೆಃ 541 / 2023**

ಫಿರ್ಯಾದುದಾರರು : ಸರ್ಕಾರದ ಪರವಾಗಿ,
ಬಾಗೇಪಲ್ಲಿ ಆರಕ್ಷಕ ಠಾಣೆ
(ಪ್ರತಿನಿಧಿಸುವವರು ಸಹಾಯಕ ಸರ್ಕಾರಿ ಅಭಿಯೋಜಕರು)

- *ವಿರುದ್ಧ* -

ಆರೋಪಿರುಃ

1. ಶ್ರೀ. ಅಂಜಿನಪ್ಪ
ಬಿನ್.ಕೃಷ್ಣಪ್ಪ
ವಯಸ್ಸು 38 ವರ್ಷ,

2. ಶ್ರೀಮತಿ. ಗಂಗರಾಜಮ್ಮ
ಕೋಂ. ಅಂಜಿನಪ್ಪ
ವಯಸ್ಸು 35 ವರ್ಷ,

3. ಶ್ರೀಮತಿ. ವೆಂಕಟಲಕ್ಷ್ಮಮ್ಮ
ಕೋಂ. ಕೃಷ್ಣಪ್ಪ
ವಯಸ್ಸು 55 ವರ್ಷ,

4. ಶ್ರೀ. ಕೃಷ್ಣಪ್ಪ
ಬಿನ್.ನಾರಾಯಣಪ್ಪ
ವಯಸ್ಸು 65 ವರ್ಷ,

ಎಲ್ಲರ ವಾಸಃ ಅಭಕವಾರಿಪಲ್ಲಿ ಗ್ರಾಮ,
ಬಾಗೇಪಲ್ಲಿ ತಾಲ್ಲೂಕು
ಚಿಕ್ಕಬಳ್ಳಾಪುರ ಜಿಲ್ಲೆ.

(ಪ್ರತಿನಿಧಿಸುವವರು **ಶ್ರೀ. ಆರ್.ಜೆ.,** ವಕೀಲರು)

| | | |
|---|---|---|
| ಅಪರಾಧ ನಡೆದ ದಿನಾಂಕ | : | 14.02.2022 |
| ಅಪರಾಧ ವರದಿಯಾದ ದಿನಾಂಕ | : | 14.02.2023 |
| ಫಿರ್ಯಾದುದಾರರ ಹೆಸರು | : | ಶ್ರೀ. ಶಿವಪ್ಪ |
| ಸಾಕ್ಷ್ಯ ಪ್ರಾರಂಭಿಸಿದ ದಿನಾಂಕ | : | 02.07.2026 |
| ತಿರ್ಪೀನ ದಿನಾಂಕ | : | 07.07.2026 |
| ಆರೋಪಿಸಲಾದ ದಂಡನೀಯ ಅಪರಾಧ | : | ಭಾರತೀಯ ದಂಡ ಸಂಹಿತೆ, ಕಲಂ 323, 324, 325, 504, 506 ಮತ್ತು ಸಹವಾಚಕ ಕಲಂ 34. |
| ನ್ಯಾಯಾಧೀಶರ ಅಭಿಪ್ರಾಯ | : | ಭಾರತೀಯ ದಂಡ ಸಂಹಿತೆ, ಕಲಂ 323, 324, 325, 504, 506 ಮತ್ತು ಸಹವಾಚಕ ಕಲಂ 34 ರ ರೀತ್ಯಾ ದಂಡನೀಯ ಅಪರಾಧಗಳ ಆರೋಪಗಳಿಂದ ಆರೋಪಿತರನ್ನು ದೋಷ ಮುಕ್ತಗೊಳಿಸಿ ನಿರ್ದೋಷಿಗಳೆಂದು ನಿರ್ಣಯಿಸಿ ಅವರ ಬಿಡುಗಡೆಗೆ ಆದೇಶಿಸಲಾಗಿದೆ. |
| ಸರ್ಕಾರದ ಪರವಾಗಿ | : | ಸಹಾಯಕ ಸರ್ಕಾರಿ ಅಭಿಯೋಜಕರು, ಬಾಗೇಪಲ್ಲಿ |
| ಆರೋಪಿತರ ಪರವಾಗಿ | : | ಶ್ರೀ. ಆರ್.ಜೆ., ವಕೀಲರು |
| ತೀರ್ಪು ನೀಡಲು ತೆಗೆದುಕೊಂಡ ಒಟ್ಟು ಅವಧಿ | : | ವರ್ಷಗಳು 04 ತಿಂಗಳು 04 ದಿನಗಳು 23 |

**: ತೀರ್ಪು :**

ದಿನಾಂಕ 14.02.2023 ರಂದು ರಾತ್ರಿ 8:00 ಗಂಟೆಗೆ ಫಿರ್ಯಾದದಾರರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಆರೋಪಿತರ ವಿರುದ್ದ ಠಾಣಾ ಮೊ.ಸಂಖ್ಯೆ 038/2023 ರಂತೆ ಭಾರತೀಯ ದಂಡ ಸಂಹಿತೆ, ಕಲಂ 323, 324, 325, 504, 506 ಮತ್ತು ಸಹವಾಚಕ ಕಲಂ 34 ಅಡಿಯಲ್ಲಿನ ಆರೋಪಗಳಿಗೆ ಪ್ರಕರಣವನ್ನು ನೊಂದಾಯಿಸಿಕೊಳ್ಳಲಾಗಿರುತ್ತದೆ.

**2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ**

ದಿನಾಂಕ 14.02.2023 ರಂದು ಮದ್ಯಾಹ್ನ 3-00 ಗಂಟೆಯ ಸಮಯದಲ್ಲಿ ಬಾಗೇಪಲ್ಲಿ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಅಭಕವಾರಿಪಲಿ, ಗ್ರಾಮದ 1 ಮತ್ತು 2ನೇ ಆರೋಪಿಗಳು ಚಾಸಾ-5 ರವರು ತಮ್ಮ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ, ಹಳೆಯ ದ್ವೇಷವನ್ನಿಟ್ಟುಕೊಂಡು ಚಾಸಾ-5 ರವರ ಮೇಲೆ ಗಲಾಟೆ ಮಾಡಿರುತ್ತಾರೆ ಈ ವಿಚಾರವಾಗಿ ದಿನಾಂಕ 14-02-2023 ರಂದು ಸಂಜೆ 6-00 ಗಂಟೆ ಸಮಯದಲ್ಲಿ, 1ನೇ ಆರೋಪಿಯು ಮನೆಯ ಬಳಿಗೆ ಚಾಸಾ-1, 4, 5, 6 ರವರು ಹೋಗಿ 1 ರಿಂದ 4ನೇ ಆರೋಪಿರವರನ್ನು ಕುರಿತು ಏಕೆ ಮಧ್ಯಾಹ್ನ ಗಲಾಟೆ ಮಾಡಿದ್ದು ಎಂದು ಕೇಳಿದ್ದಕ್ಕೆ 1 ರಿಂದ 4ನೇ ಆರೋಪಿತರು ಚಾಸಾ-1, 4, 5, 6 ರವರ ಮೇಲೆ ಜಗಳಕ್ಕೆ ಬಂದು ಅವಾಚ್ಯ ಶಬ್ದಗಳಿಂದ ಬೈದು 1ನೇ ಆರೋಪಿಯು ಏಕಾ ಏಕಿ ತನ್ನ ಮನೆಯಿಂದ ಮಚ್ಚನ್ನು ಎತ್ತಿಕೊಂಡು ಬಂದು ಚಾಸಾ-6 ರವರ ಎಡಕೈನ ಮೊಣಕೈ ಹೊಡೆದು ಗಾಯವನ್ನುಂಟು ಮಾಡಿದ್ದು, 2ನೇ ಆರೋಪಿ ರವರು ಚಾಸಾ-5 ರವರಿಗೆ ಕೈಗಳಿಂದ ಹೊಡೆದು ನೋವುಂಟು ಮಾಡಿದ್ದು ಜಗಳ ಬಿಡಿಸಲು ಹೋದ ಚಾಸಾ-1 ರವರಿಗೆ 1ನೇ ಆರೋಪಿಯು ಮೈಮೇಲೆ ಕೈಗಳಿಂದ ಹೊಡೆದು ಬಾಯಿಯ ಹಲ್ಲಿನಿಂದ ತನ್ನ ಎದೆಗೆ ಕಚ್ಚಿದ್ದು 4ನೇ ಆರೋಪಿಯು ಅಲ್ಲಿಯೇ ಇದ್ದ ಒಂದು ದೊಣ್ಣೆಯನ್ನು ಎತ್ತಿಕೊಂಡು ಚಾಸಾ-4 ರವರ ತಲೆಗೆ ಹೊಡೆದಿದ್ದು 3ನೇ ಆರೋಪಿಯು ಚಾಸಾ-1 ರವರನ್ನು ಕೈಗಳಿಂದ ಮೈಮೇಲೆ ಹೊಡೆದು 1 ರಿಂದ 4ನೇ ಆರೋಪಿತರು ಚಾಸಾ-1, 4, 5, 6 ರವರನ್ನು ಕುರಿತು ನಿಮ್ಮನ್ನು ಪ್ರಾಣ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ,ಕಲಂ 323, 324, 325, 504, 506 ಮತ್ತು ಸಹವಾಚಕ ಕಲಂ 34 ಅಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಲಾಗಿರುತ್ತದೆ.

**3.** ಈ ನ್ಯಾಯಾಲಯವು ಘಟನೆ ನಡೆಯಿತೆನ್ನಲಾದ ಅಪರಾಧಗಳ ಬಗ್ಗೆ ಸಂಜ್ಞೆಯನ್ನು ತೆಗೆದು ಕೊಂಡು, 1 ರಿಂದ 4ನೇ ಆರೋಪಿತರಿಗೆ ನ್ಯಾಯಾಲಯದ ಹಾಜರಾತಿಗಾಗಿ ಸಮನ್ಸನ್ನು ಹೊರಡಿಸಿರುತ್ತದೆ. ಆರೋಪಿತರು ದಿನಾಂಕ 24.02.2023 ರಂದು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನನ್ನು ಪಡೆದು ಕೊಂಡಿರುತ್ತಾರೆ. ಆರೋಪಿತರಿಗೆ ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ 207ರ ರೀತಿ ಅಗತ್ಯಪಡಿಸಿರುವಂತೆ ದೋಷಾರೋಪಣೆ ಪಟ್ಟಿ ಹಾಗೂ ಯುಕ್ತ ದಾಖಲೆಗಳ ನಕಲುಗಳನ್ನು ಒದಗಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ಕಲಂ 504, 324, 323, 506 ಮತ್ತು ಸಹವಾಚಕ ಕಲಂ 34 ರ ಆರೋಪಗಳಿಗಾಗಿ ಆರೋಪಿತರ ವಿರುದ್ಧದ ದೋಷಾರೋಪಣೆಯನ್ನು ತಯಾರಿಸಿ, ಓದಿ, ವಿವರಿಸಲಾಗಿ ಆರೋಪಿತರು ತನ್ನ ವಿರುದ್ಧದ ಆರೋಪಗಳನ್ನು ಅಲ್ಲಗಳೆದದ್ದು, ಸದರಿ ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು. ಭಾರತೀಯ ದಂಡ ಸಂಹಿತೆ ಕಲಂ 325 ರನ್ವಯ ದೋಷಾರೋಪಣೆಯನ್ನು ರಚಿಸಲು ಸಾಕಷ್ಟು ಅಂಶಗಳು ಕಂಡುಬರದೆ ಇವರು ಕಾರಣ ಸದರಿ ಕಲಂನ್ವಯ ದೋಷಾರೋಪಣೆಯನ್ನು ರಚಿಸಲು ಕೈಬಿಡಲಾಗಿದೆ.

**4.** ಅಭಿಯೋಜನೆಯವರು ತಮ್ಮ ಪ್ರಕರಣವನ್ನು ಬೆಂಬಲಸಿ, ಫಿರ್ಯಾದಿದಾರರು ಸಾಕ್ಷಿ ಚಾ.ಸಾ.1 ಮತ್ತು ಗಾಯಾಳು ಸಾಕ್ಷಿದಾರರಾದ ಚಾ.ಸಾ.4 ರಿಂದ ಚಾ.ಸಾ.6 ರವರನ್ನು ಅ.ಸಾ.1 ರಿಂದ 4 ರವರನ್ನಾಗಿ ವಿಚಾರಣೆಗೆ ಒಳಪಡಿಸಿ ಕೊಂಡು ನಿಪಿ.1 ರಿಂದ ನಿಪಿ.5 ದಾಖಲೆಗಳನ್ನು ಗುರ್ತಿಸಿ ಕೊಂಡಿರುತ್ತಾರೆ. ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿಯಾದ ಅ.ಸಾ.1 ರಿಂದ ಅ.ಸಾ.4 ರವರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ, ಉಳಿದ

ಸಾಕ್ಷಿದಾರರಿಗೆ ಸಮನ್ಸ್ ನೀಡಿ ಎನ್ನುವ ಅಭಿಯೋಜನೆಯವರ ಕೋರಿಕೆಯನ್ನು ತಿರಸ್ಕರಿಸಲಾಗಿರುತ್ತದೆ. ವಿಚಾರಣೆ ಮಾಡಲಾದ ಸಾಕ್ಷಿದಾರರ ಹೇಳಿಕೆಯಲ್ಲಿ ಆರೋಪಿತರ ಹಿತಾಸಕ್ತಿಗೆ ವಿರುದ್ಧವಾದ ಅಂಶಗಳು ಇರದಿದ್ದ ಕಾರಣ ಅವರನ್ನು ಅಪರಾಧಿಕ ಸಂಹಿತೆ ಕಲಂ 313 ರಡಿಯಲ್ಲಿ ಪ್ರಶ್ನಿಸಿ ಹೇಳಿಕೆಯನ್ನು ದಾಖಲಿಸುವ ಹಂತವನ್ನು ಕೈಬಿಡಲಾಗಿದೆ.

**5.** ಉಭಯತ್ರರ ವಾದವನ್ನು ಆಲಿಸಿ ಕಡತವನ್ನು ನೋಡಲಾಗಿ ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಬಂದಿರುತ್ತವೆ.

## ಅಂಶಗಳು

**ಅಂಶ-1 :** ದಿನಾಂಕ 14.02.2023 ರಂದು ಮದ್ಯಾಹ್ನ 3.00 ಗಂಟೆಯ ಸಮಯದಲ್ಲಿ ಬಾಗೇಪಲ್ಲಿ ಪೊಲೀಸ್ ಠಾಣಾ ಸರಹದ್ದು, ಬಾಗೇಪಲ್ಲಿ ತಾಲ್ಲೂಕಿನ ಅಭಕವಾರಿಪಲ್ಲಿ ಗ್ರಾಮದ ವಾಸಿಯಾದ ಚಾಸಾ-5 ರವರ ತಮ್ಮ ಜಮೀನಲ್ಲಿ ಕೆಲಸ ಮಾಡುತ್ತಿದ್ದಾಗ, 1 ಮತ್ತು 2ನೇ ಆರೋಪಿಗಳು ಹಳೆಯ ದ್ವೇಷವನ್ನಿಟ್ಟುಕೊಂಡು ಚಾಸಾ-5 ರವರ ಮೇಲೆ ಗಲಾಟೆ ಮಾಡಿದ್ದು, ಅದೇ ದಿನ ಸಂಜೆ 6-00 ಗಂಟೆ ಸಮಯದಲ್ಲಿ ಚಾಸಾ-1, 4, 5, 6 ರವರು 1ನೇ ಆರೋಪಿತರ ಮನೆಯ ಬಳಿ ಬಂದು ಮಧ್ಯಾಹ್ನ ನಡೆದ ಗಲಾಟೆಯ ಬಗ್ಗೆ ಪ್ರಶ್ನಿಸಿದಾಗ, ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ-1, 4, 5, 6 ರವರು ಕುಪಿತಗೊಂಡು ಶಾಂತಿ ಭಂಗವನ್ನುಂಟು ಮಾಡಿಲಿ ಎಂಬ ಉದ್ದೇಶದಿಂದ ಚಾಸಾ-1, 4, 5, 6 ರವರನ್ನು ಕುರಿತು "ಲೋಫರ್ ನನ್ನ ಮಕ್ಕಳ, ಬೋಳಿ ನನ್ನ ಮಕ್ಕಳ ನಮ್ಮ ಮನೆಯ ಬಳಿಗೆ ಬಂದು ಕೇಳುತ್ತೀರಾ" ಎಂದು ಅವಾಚ್ಯ ಶಬ್ದಗಳಿಂದ ಬೈದಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ, ಕಲಂ 504 ಮತ್ತು ಸಹ ವಾಚಕ ಕಲಂ 34 ಅಡಿಯಲ್ ಶಿಕ್ಷಾರ್ಹ ಅಪರಾಧ

ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-2:** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 4ನೇ ಆರೋಪಿಗಳು ಸಮಾನ ಉದ್ದೇಶದಿಂದ ಆ ಪೈಕಿ 1ನೇ ಆರೋಪಿಯು ಸ್ವ-ಇಚ್ಛೆಯಿಂದ ಏಕಾ ಏಕಿ ನಿಮ್ಮ ಮನೆಯಿಂದ ಮಚ್ಚನ್ನು ಎತ್ತಿಕೊಂಡು ಬಂದು ಚಾಸಾ-6 ರವರ ಎಡಕೈನ ಮೊಣಕೈ ಹೊಡೆದು ಗಾಯವನ್ನುಂಟು ಮಾಡಿದ್ದು ಹಾಗೂ 4ನೇ ಆರೋಪಿಯು ಸ್ವ-ಇಚ್ಛೆಯಿಂದ ಅಲ್ಲಿಯೇ ಇದ್ದ ಒಂದು ದೊಣ್ಣೆಯನ್ನು ಎತ್ತಿಕೊಂಡು ಚಾಸಾ-4 ರವರ ತಲೆಗೆ ಹೊಡೆದಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ, ಕಲಂ 324 ಮತ್ತು ಸಹ ವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-3:** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 4ನೇ ಆರೋಪಿಗಳು ಸಮಾನ ಉದ್ದೇಶದಿಂದ ಆ ಪೈಕಿ 2ನೇ ಆರೋಪಿತರು ಚಾಸಾ-5 ರವರಿಗೆ ಕೈಗಳಿಂದ ಹೊಡೆದು ನೋವುಂಟು ಮಾಡಿದ್ದು, ಜಗಳ ಬಿಡಿಸಲು ಬಂದ ಚಾಸಾ-1 ರವರಿಗೆ 1ನೇ ಆರೋಪಿಯು ಮೈ-ಮೇಲೆ ಕೈಗಳಿಂದ ಹೊಡೆದು ಬಾಯಿಯ ಹಲ್ಲಿನಿಂದ ಚಾಸಾ-1 ರವರ ಎದೆಗೆ ಕಚ್ಚಿದ್ದು ಮತ್ತು 3ನೇ ಆರೋಪಿಯು ಸಹ ಚಾಸಾ-1 ರವರಿಗೆ ಕೈಗಳಿಂದ ಮೈ-ಮೇಲೆ ಹೊಡೆದು ಸಾಧಾರಣಾ ಸ್ವರೂಪದ ಗಾಯವನ್ನುಂಟು ಮಾಡಿದ್ದು ಆ ಮೂಲಕ ಭಾರತೀಯ ದಂಡ ಸಂಹಿತೆ, ಕಲಂ 323 ಮತ್ತು ಸಹ ವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ

ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-4:** ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ, 1 ರಿಂದ 4ನೇ ಆರೋಪಿಗಳು ಸಮಾನ ಉದ್ದೇಶದಿಂದ ಚಾಸಾ-1, 4, 5, 6 ರವರನ್ನು ಕುರಿತು ನಿಮ್ಮನ್ನ ಪ್ರಾಣ ಸಹಿತ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ, ಕಲಂ 506 ಮತ್ತು ಸಹ ವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂದು ಅಭಿಯೋಜನೆಯವರು ಸಂಶಯಾತೀತವಾಗಿ ಸಾಬೀತು ಪಡಿಸಿದ್ದಾರೆಯೇ ?

**ಅಂಶ-5:** ಹಾಗಿದ್ದರೆ ಏನು ಆದೇಶ ?

**6.** ಮೇಲ್ಕಂಡ ಅಂಶಗಳಿಗೆ ನ್ಯಾಯಾಲಯದ ನಿರ್ಣಯಗಳು ಈ ಕೆಳಗಿನಂತೆ ಇದೆಃ

| | | |
|---|---|---|
| ಅಂಶ 1 | - | ನಕಾರಾತ್ಮಕವಾಗಿ |
| ಅಂಶ 2 | - | ನಕಾರಾತ್ಮಕವಾಗಿ |
| ಅಂಶ 3 | - | ನಕಾರಾತ್ಮಕವಾಗಿ |
| ಅಂಶ 4 | - | ನಕಾರಾತ್ಮಕವಾಗಿ |
| ಅಂಶ 5 | - | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

## : ಕಾರಣಗಳು :

**7.** **ಅಂಶ ಸಂಖ್ಯೆ 1 ರಿಂದ 4** ಅಭಿಯೋಜನೆಯ ಸಂಕ್ಷಿಪ್ತ ಪ್ರಕರಣದ ಸಾರಾಂಶವನ್ನು ಈಗಾಗಲೇ ಖಂಡಿಕೆ-2 ರಲ್ಲಿ ಹೇಳಲಾಗಿದ್ದು, ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಾದ ಅ.ಸಾ.1 ರವರು ಪ್ರಥಮ ವರ್ತಮಾನ ಹೇಳಿಕೆ ನೀಡಿದ ಸಾಕ್ಷಿದಾರರು ಹಾಗೂ ಗಾಯಾಳುಗಳಾಗಿದ್ದು ಅ.ಸಾ.2 ರಿಂದ

ಅ.ಸಾ.4 ರವರನ್ನು ಗಾಯಾಳು ಸಾಕ್ಷಿದಾರರಾಗಿರುತ್ತಾರೆ. ಅಭಿಯೋಜನೆಯು ತಮ್ಮ ಪ್ರಕರಣವನ್ನು ಸಾಬೀತು ಪಡಿಸುವಲ್ಲಿ ಈ ಮೇಲ್ಕಂಡ ಸಾಕ್ಷಿದಾರರನ್ನು ವಿಚಾರಣೆಗೊಳಪಡಿಸಿದ್ದಾರೆ.

**8.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಫಿರ್ಯಾದಿ ಸಾಕ್ಷಿ ಅ.ಸಾ.1 ಶಿವಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ನ್ಯಾಯಾಲಯದ ಮುಂದಿರುವ ಆರೋಪಿತರು ನನಗಾಲೀ ಅಥವಾ ಚಾಸಾ-4 ರಿಂದ 6 ರವರಿಗಾಗಲೀ ಯಾವತ್ತೂ ಕೈಗಳಿಂದ ಅಥವಾ ಮಚ್ಚಿನಿಂದಾಗಲೀ ಮತ್ತು ದೊಣ್ಣೆಯಿಂದಾಗಲೀ ಹೊಡೆದು ಹಲ್ಲೆ ಮಾಡಿರುವುದಿಲ್ಲ ಮತ್ತು ಬಾಯಿಂದ ಕಚ್ಚಿರುವುದಿಲ್ಲ. ನನಗಾಗಲಿ ಅಥವಾ ಚಾಸಾ 4 ರಿಂದ 6 ರವರಿಗಾಗಲೀ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ ಎಂದು ಈಗ್ಗೆ ಸುಮಾರು 3 ವರ್ಷಗಳ ಹಿಂದೆ ಪೋಲೀಸರು ನನ್ನಿಂದ ಕೆಲವೊಂದು ದಾಖಲೆಗಳಿಗೆ ಸಹಿ ಪಡೆದು ಕೊಂಡಿರುತ್ತಾರೆ. ಈಗ್ಗೆ ಸುಮಾರು 3 ವರ್ಷಗಳ ಹಿಂದೆ ನನ್ನ ಸ್ವಂತ ಕೆಲಸದ ಮೇರೆಗೆ ಪೋಲೀಸ್ ಠಾಣೆಗೆ ಹೋಗಿದ್ದಾಗ ಪೋಲೀಸರ ಕೋರಿಕೆಯ ಮೇರೆಗೆ ಸಹಿಗಳನ್ನು ಹಾಕಿರುತ್ತೇನೆ ಎಂದು ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದಿರುವುದಿಲ್ಲ. ನಾನು ನಿಪಿ.1 ಮತ್ತು 2 ರಲ್ಲಿರುವ ಸಹಿಗಳನ್ನು ಯಾವ ವಿಚಾರಕ್ಕೆ ಹಾಕಿರುತ್ತೇನೆಂದು ಗೊತ್ತಿಲ್ಲ. ಪೋಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**9.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಗಾಯಾಳು ಸಾಕ್ಷಿ ಅ.ಸಾ-2 ಆಂಜಿನಪ್ಪ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ನ್ಯಾಯಾಲಯದ ಮುಂದಿರುವ ಆರೋಪಿಗಳು ನನ್ನ

ಸಂಬಂಧಿಕರು. ಆರೋಪಿತರು ನನಗಾಲೀ ಅಥವಾ ಚಾಸಾ-4 ರಿಂದ 6 ರವರಿಗಾಗಲೀ ಯಾವತ್ತೂ ಕೈಗಳಿಂದ ಅಥವಾ ಮಚ್ಚಿನಿಂದಾಗಲೀ ಮತ್ತು ದೊಣ್ಣೆಯಿಂದಾಗಲೀ ಹೊಡೆದು ಹಲ್ಲೆ ಮಾಡಿರುವುದಿಲ್ಲ ಮತ್ತು ಬಾಯಿಂದ ಕಚ್ಚಿರುವುದಿಲ್ಲ. ನನಗಾಗಲಿ ಅಥವಾ ಚಾಸಾ 4 ರಿಂದ 6 ರವರಿಗಾಗಲೀ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**10.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಗಾಯಾಳು ಸಾಕ್ಷಿ ಅ.ಸಾ-3 ಆಂಜಿನಮ್ಮ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ನ್ಯಾಯಾಲಯದ ಮುಂದಿರುವ ಆರೋಪಿಗಳು ನನ್ನ ಸಂಬಂಧಿಕರು. ಆರೋಪಿತರು ನನಗಾಲೀ ಅಥವಾ ಚಾಸಾ-1, 4 ಮತ್ತು 6 ರವರಿಗಾಗಲೀ ಯಾವತ್ತೂ ಕೈಗಳಿಂದ ಅಥವಾ ಮಚ್ಚಿನಿಂದಾಗಲೀ ಮತ್ತು ದೊಣ್ಣೆಯಿಂದಾಗಲೀ ಹೊಡೆದು ಹಲ್ಲೆ ಮಾಡಿರುವುದಿಲ್ಲ ಮತ್ತು ಬಾಯಿಂದ ಕಚ್ಚಿರುವುದಿಲ್ಲ. ನನಗಾಗಲಿ ಅಥವಾ ಚಾಸಾ-1, 4 ಮತ್ತು 6 ರವರಿಗಾಗಲೀ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದು ಕೊಂಡಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**11.** ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಸಾಕ್ಷಿದಾರರಲ್ಲಿ ಗಾಯಾಳು ಸಾಕ್ಷಿ ಅ.ಸಾ-4 ಭಾರ್ಗವ್ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನುಡಿದಿರುವುದೇನೆಂದರೆ, ನ್ಯಾಯಾಲಯದ ಮುಂದಿರುವ ಆರೋಪಿಗಳು ನನ್ನ ಸಂಬಂಧಿಕರು. ಆರೋಪಿತರು ನನಗಾಲೀ ಅಥವಾ ಚಾಸಾ-1, 4 ಮತ್ತು 5 ರವರಿಗಾಗಲೀ ಯಾವತ್ತೂ ಕೈಗಳಿಂದ ಅಥವಾ ಮಚ್ಚಿನಿಂದಾಗಲೀ ಮತ್ತು

ದೊಣ್ಣೆಯಿಂದಾಗಲೀ ಹೊಡೆದು ಹಲ್ಲೆ ಮಾಡಿರುವುದಿಲ್ಲ ಮತ್ತು ಬಾಯಿಂದ ಕಚ್ಚಿರುವುದಿಲ್ಲ. ನನಗಾಗಲಿ ಅಥವಾ ಚಾಸಾ-1, 4 ಮತ್ತು 5 ರವರಿಗಾಗಲೀ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿರುವುದಿಲ್ಲ. ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದು ಕೊಂಡಿರುವುದಿಲ್ಲ ಎಂದು ಪ್ರತಿಕೂಲ ಸಾಕ್ಷಿಯನ್ನು ನುಡಿದಿರುತ್ತಾರೆ.

**12.** ಈ ಮೇಲೆ ಹೇಳಿದ ಮೌಖಿಕ ಸಾಕ್ಷ್ಯಕ್ಕೆ ಬೆಂಬಲವಾಗಿ, ಅಭಿಯೋಜನೆಯವರು ಅಸಾ.1 ರವರು ನೀಡಿದ ದೂರನ್ನು ನಿಪಿ.1 ಎಂದು, ಕೃತ ನಡೆದ ಸ್ಥಳದ ಪಂಚನಾಮೆಯನ್ನು ನಿಪಿ-2 ಎಂದು, ಅಸಾ.2 ರವರು ನೀಡಿದ ಹೇಳಿಕೆಯನ್ನು ನಿಪಿ.3 ಎಂದು, ಮತ್ತು ಅಸಾ.3 ರವರು ನೀಡಿದ ಹೇಳಿಕೆಯನ್ನು ನಿಪಿ.4 ಎಂದು ಗುರ್ತಿಸಿಕೊಂಡಿರುತ್ತಾರೆ.

**13.** ಅಭಿಯೋಜನೆಯು ಪ್ರಾ.ಸಾ.1 ರಿಂದ 4 ರವರನ್ನು ಪಾಟೀ ಸವಾಲುಗೊಳಿಸಿದರೂ ಸದರಿ ಸಾಕ್ಷಿದಾರರಿಂದ ಅಭಿಯೋಜನೆಯನ್ನು ಬೆಂಬಲಿಸುವಂತಹ ಯಾವುದೇ ಸಾಕ್ಷ್ಯ ಹೇಳಿಕೆಗಳನ್ನು ಹೊರತೆಗೆಯಲಾಗಲಿಲ್ಲ. ಈ ಪ್ರಕರಣದಲ್ಲಿ ವಿಚಾರಣೆ ಮಾಡಲಾದ ಪ್ರಮುಖ ಸಾಕ್ಷಿದಾರರು ಅಭಿಯೋಜನೆಯನ್ನು ಬೆಂಬಲಿಸದಿದ್ದ ಕಾರಣ ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಲಾಗಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಪಟ್ಟಂತೆ ನ್ಯಾಯಾಲಯದಲ್ಲಿ ಹಾಜರುಪಡಿಸಲಾದ ಸಾಕ್ಷ್ಯದ ಅವಲೋಕನ ಮಾಡಿ ನೋಡಿದಾಗ ಅಭಿಯೋಜನೆ ಪ್ರಕರಣದ ಬಗ್ಗೆ ಬೆಳಕು ಚೆಲ್ಲಬಹುದಾಗಿದ್ದ ಪ್ರಾ.ಸಾ.1 ರಿಂದ 4 ರವರು ಅಭಿಯೋಜನೆಯನ್ನು ಬೆಂಬಲಿಸದೇ ಪ್ರತಿಕೂಲ ಹೊಂದಿದ್ದು, ಅಭಿಯೋಜನೆಗೆ ಆಘಾತಕಾರಿ ಆಗಿರುತ್ತದೆ. ಆದುದರಿಂದ ಅಭಿಯೋಜನೆಯವರು ಹೇಳುವಂತಹ ಘಟನೆ ನಡೆದಿರುವ ಸಾಧ್ಯತೆ ಇದೆ ಎಂದು ತೋರಿಸಲು ಅಭಿಯೋಜನೆ ವಿಪಲ್ಲಿವಾಗಿದೆ. ಆದ್ದರಿಂದ 1 ರಿಂದ 4ನೇ

ಆರೋಪಿತರ ವಿರುದ್ಧ ಹೊರಿಸಲಾದ ಆರೋಪಗಳನ್ನು ಸಂಶಯಾತೀತವಾಗಿ ಸಾಭೀತುಪಡಿಸುವಲ್ಲಿ ಅಭಿಯೋಜನೆಯವರು ಸಂಪೂರ್ಣವಾಗಿ ವಿಫಲರಾಗಿರುತ್ತಾರೆಂದು ನಿರ್ಣಯಿಸಿ, ನ್ಯಾಯಾಲಯದ ನಿರ್ಣಯಕ್ಕೆ ಬಂದ ಅಂಶ 1 ರಿಂದ 4 ನ್ನು **ನಕಾರಾತ್ಮಕವಾಗಿ** ಉತ್ತರಿಸಿದೆ.

**14.** **ಅಂಶ ಸಂಖ್ಯೆ-5:** ಮೇಲ್ಕಂಡ ಚರ್ಚೆಯಲ್ಲಿ ಅಂಶ-1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತಸಿರುವುದರಿಂದ 1 ರಿಂದ 4ನೇ ಆರೋಪಿತರು ಸಂಶಯದ ಲಾಭ ಹೊಂದಿ ಬಿಡುಗಡೆಗೆ ಅರ್ಹರಾಗಿದ್ದು, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಆದೇಶ**

ಅಪರಾಧಿಕ ಪ್ರಕ್ರಿಯಾ ಸಂಹಿತೆ 248(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಪ್ರಕರಣದ 1 ರಿಂದ 4ನೇ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ, ಕಲಂ 504, 324, 323, 506 ಮತ್ತು ಸಹವಾಚಕ ಕಲಂ 34 ರಡಿಯಲ್ಲಿನ ಆರೋಪಗಳಿಂದ 1 ರಿಂದ 4ನೇ ಆರೋಪಿತರನ್ನು ನಿರ್ದೋಷಿಗಳು ಎಂದು ತೀರ್ಮಾನಿಸಿ ಬಿಡುಗಡೆಗೊಳಿಸಲಾಗಿದೆ.

ಆರೋಪಿಗಳು ಮತ್ತು ಅವರ ಜಾಮೀನುದಾರರು ಬರೆದು ಕೊಟ್ಟಿರುವ ಜಾಮೀನಿನ ಮುಚ್ಚಳಿಕೆಗಳು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರಡಿಯಲ್ಲಿ 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

(ಶೀಘ್ರಲಿಪಿಗಾರಿಗೆ ಗಣಕಯಂತ್ರದಲ್ಲಿ ನೇರವಾಗಿ ಉಕ್ತಲೇಖನ ಕೊಟ್ಟಿದ್ದು, ಅವರಿಂದ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ ನಂತರ ಓದಿ, ತಿದ್ದುಪಡಿ ಮಾಡಿ ಈ ದಿನ ಅಂದರೆ ದಿನಾಂಕ 07ನೇ ಜುಲೈ - 2026 ರಂದು ತೆರೆದು ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

ಸಹಿ/-

**(ಶ್ರೀಮತಿ. ರಂಜಿತ. ಎಸ್)**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.

**: ಅನುಬಂಧ :**

**1) ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ :**

| | | |
|---|---|---|
| ಪ್ರಾಸಾ.1 | : | ಶಿವಪ್ಪ |
| ಪ್ರಾಸಾ.2 | : | ಆಂಜಿನಪ್ಪ |
| ಪ್ರಾಸಾ.3 | : | ಆಂಜಿನಮ್ಮ |
| ಪ್ರಾಸಾ.4 | : | ಭಾರ್ಗವ್ |

**2) ಅಭಿಯೋಜನೆ ಪರ ಗುತಿರ್ಸಿದ ದಾಖಲಾತಿಗಳು :**

| | | |
|---|---|---|
| ನಿಪಿ-1 | : | ದೂರು |
| ನಿಪಿ-1(ಎ) | : | ಸಾಕ್ಷಿ ಸಹಿ |
| ನಿಪಿ-2 | : | ಪಂಚನಾಮೆ |
| ನಿಪಿ-2(ಎ) | : | ಸಾಕ್ಷಿ ಸಹಿ |
| ನಿಪಿ-3 | : | ಪ್ರಾಸಾ.2 ರವರ ಹೇಳಿಕೆ |
| ನಿಪಿ-4 | : | ಪ್ರಾಸಾ.3 ರವರ ಹೇಳಿಕೆ |

**3) ಆರೋಪಿತರ ಪರ ಯಾವುದೇ ಸಾಕ್ಷಿ ಮತ್ತು ದಾಖಲೆಗಳು**

ಇರುವುದಿಲ್ಲ.

**4) ಮುದ್ದೆ ಮಾಲುಗಳು :**

ಇರುವುದಿಲ್ಲ.

ಸಹಿ/-

**( ಶ್ರೀಮತಿ. ರಂಜಿತ. ಎಸ್)**
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ,
ಬಾಗೇಪಲ್ಲಿ.